ಯಾಗಿರುವವರೆಗೆ ಆ ಕಂಪೆನಿಯಲ್ಲಿ ಕೆಲಸ ಮಾಡಬಾರದೆಮದು ಮಗನಿಗೆ ಆದೇಶಿಸಿದರು! *('ಕೈತುತ್ತು', ಪು. ೬)*

ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರು ಮಹಾರಾಜರಿಂದ ಬಂದ ದಿವಾನ್ ಪದವಿಯ ಆದೇಶ ಒಪ್ಪಿಕೊಳ್ಳುವ ಮುನ್ನವೇ ತಾಯಿಯ ಬಳಿ ತಮ್ಮ ಕುಟುಂಬದವರಿಗೆ, ಬಂಧುಮಿತ್ರರಿಗೆ ಸರಕಾರಿ ಸೌಲಭ್ಯ, ನೌಕರಿ ಇತ್ಯಾದಿಗಳನ್ನು ಕೇಳಬಾರದೆಂದು ಹಾಗೂ ತಮ್ಮ ಹೆಸರನ್ನು ಯಾವುದೇ ರೀತಿಯಲ್ಲೂ ಬಳಸಬಾರದೆಂದು ಭಾಷೆ ತೆಗೆದುಕೊಂಡ ಜ್ವಲಂತ ಉದಾಹರಣೆ ನಮ್ಮೆಲ್ಲರ ಕಣ್ಣ ಮುಂದೆ ಇದ್ದೇ ಇದೆ. ಸಮಾಜದ ಹಣ ಎಂದರೆ ಬೆಂಕಿಯಂತೆ – ಹೆಚ್ಚು ಕಾಲ ನಮ್ಮೊಂದಿಗೆ ಇಟ್ಟುಕೊಳ್ಳಬಾರದು ಹಾಗೂ ಸ್ವಂತಕ್ಕೆ ಬಳಸಬಾರದು ಎಂಬುದನ್ನು ಮರೆಯಬಾರದು.

## ಆಧ್ಯಾತ್ಮಿಕ ಜವಾಬ್ದಾರಿ

''ಸೂರ್ಯನ ಕೆಳಗೆ ಇರುವ ಪ್ರತಿಯೊಂದು ವಸ್ತುವನ್ನು ಹೊಂದಿದ್ದರೂ ಆಧ್ಯಾತ್ಮವಿಲ್ಲದೆ ಇದ್ದರೆ ಪ್ರಯೋಜನವೇನು?'' *(ಕೃತಿಶ್ರೇಣಿ, ಸಂ.೭, ಪು.೨೬೧)* ''ಶ್ರೇಷ್ಠವಾದ ಜ್ಞಾನವೇ ಆಧ್ಯಾತ್ಮ ವಿದ್ಯೆ. ಅಧ್ಯಾತ್ಮ ವಿದ್ಯೆಯಿಂದ ಆನಂದ ಪ್ರಾಪ್ತಿ.'' *(ಕೃತಿಶ್ರೇಣಿ, ಸಂ.೬, ಪು.೩೭೭, ೬೧೨)* ಎನ್ನುತ್ತಾರೆ ಸ್ವಾಮೀಜಿ. ಗೀತೆಯಲ್ಲೂ ಶ್ರೀಕೃಷ್ಣನು, **'ಅಧ್ಯಾತ್ಮ ವಿದ್ಯಾ ವಿದ್ಯಾನಾಂ...'** *(೧೦.೩೨)* ಎಂದು ಅಧ್ಯಾತ್ಮ ವಿದ್ಯೆಯ ಶ್ರೇಷ್ಠತೆಯನ್ನೇ ಹೇಳುತ್ತಿದ್ದಾನೆ.

ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಆಧ್ಯಾತ್ಮಿಕ ಅಂಶವಿದೆ. ಅದೇ ಅವನ ನಿಜವಾದ ಸ್ವರೂಪ. ''ಸುಪ್ತವಾದ ದಿವ್ಯತೆಯನ್ನು ವ್ಯಕ್ತಪಡಿಸುವುದೇ ಧರ್ಮದ ಸರ್ವಸ್ವ.'' *(ಕೃತಿಶ್ರೇಣಿ, ಸಂ.೨, ಪು.೩೧೦)* ಈ ಸ್ವರೂಪದ ಅಭಿವ್ಯಕ್ತಿಯಿಂದ ವ್ಯಕ್ತಿತ್ವದಲ್ಲಿ ಸಾಮರಸ್ಯ ಉಂಟಾಗುತ್ತದೆ. ಈಗ ನಮ್ಮ ಆಲೋಚನೆ, ಭಾವೋದ್ವೇಗಗಳು, ಸಂಸ್ಕಾರಗಳು, ಆಸೆ, ಆಕಾಂಕ್ಷೆಗಳು ನಮ್ಮನ್ನು ಆಳುತ್ತಿರುವುವು. ನಾವು ಎಚ್ಚೆತ್ತು ನಮ್ಮ ವ್ಯಕ್ತಿತ್ವದ ಒಡೆತನವನ್ನು ಸ್ಥಾಪಿಸಬೇಕು. ಇಂದ್ರಿಯ, ಮನಸ್ಸು, ಭಾವನೆ ಇತ್ಯಾದಿಗಳನ್ನು ನಿಯಂತ್ರಿಸಿ ಅವು ನಮ್ಮ ಅಪ್ಪಣೆಯಂತೆ ವರ್ತಿಸುವಂತೆ ಮಾಡಬೇಕು. ನಮ್ಮ ನಿಜವಾದ ಆಧ್ಯಾತ್ಮಿಕ ಸ್ವರೂಪವನ್ನು ಅರಿತಾಗ ಮೋಕ್ಷ ಪ್ರಾಪ್ತಿಯಾಗುವುದು.

''ಸ್ವಾಮೀಜಿ, ನಾವೇಕೆ ಇಲ್ಲಿದ್ದೇವೆ? ಜೀವನಕ್ಕೇನು ಅರ್ಥ?'' ಎಂಬ ವಿದ್ಯಾರ್ಥಿಯೋರ್ವನ ಪ್ರಶ್ನೆಗೆ ಸ್ವಾಮಿ ವಿವೇಕಾನಂದರು, ''ಈ ಪ್ರಶ್ನೆಗಳಿಗೆ ಉತ್ತರ ಹುಡುಕಲಿಕ್ಕೇ ಇಲ್ಲಿರುವೆ'' ಎಂದರು. ಎಂತಹ ಅರ್ಥಗರ್ಭಿತ ಉತ್ತರ! ಶಂಕರಭಗವತ್ಪಾದರ ಈ ಕೆಳಗಿನ ನುಡಿಯೂ ಇದನ್ನೇ ಪುಷ್ಟೀಕರಿಸುತ್ತದೆ:

**ಇತಃ ಕೋ ನ್ವಸ್ತಿ ಮೂಢಾತ್ಮಾ ಯಸ್ತು ಸ್ವಾರ್ಥೇ ಪ್ರಮಾದ್ಯತಿ।**
**ದುರ್ಲಭಂ ಮಾನುಷಂ ದೇಹಂ ಪ್ರಾಪ್ಯ ತತ್ರಾಪಿ ಪೌರುಷಮ್॥**

*('ವಿವೇಕಚೂಡಾಮಣಿ', ೫)*

(ಮನುಷ್ಯನಾಗಿ ಜನಿಸಿ, ಪುರುಷತ್ವವನ್ನು ಹೊಂದಿಯೂ ತನ್ನ ಮೋಕ್ಷ ಪಡೆಯಲು ಪ್ರಯತ್ನ ಮಾಡದೆ ಆಲಸ್ಯ ಮಾಡುವವನಿಗಿಂತ ಇನ್ನು ದೊಡ್ಡ ಮೂರ್ಖ ಯಾರಿರಲು ಸಾಧ್ಯ?)

ಆಧ್ಯಾತ್ಮಿಕ ಪ್ರಜ್ಞೆಯೊಂದು ಜಾಗೃತವಾದರೆ ಉಳಿದೆಲ್ಲ ರೀತಿಯ ಜವಾಬ್ದಾರಿಗಳು ವ್ಯಕ್ತಿಯಲ್ಲಿ ತಾನೇತಾನಾಗಿ ಮೇಳೈಸುವುದು. ರಾಣಿ ಜೇನನ್ನು ಉಳಿದೆಲ್ಲಾ ಜೇನುಗಳು ಅನುಸರಿಸುವಂತೆ ಇದು. ಎಲ್ಲ ಜಯಗಳಿಗಿಂತ ಆತ್ಮಜಯವೇ ಶ್ರೇಷ್ಠ. ಈ ಆತ್ಮಜಯ ಪಡೆದ ವ್ಯಕ್ತಿಯ ನೆಲೆಯನ್ನು ಶ್ರೀಕೃಷ್ಣನು ಸುಂದರವಾಗಿ ಈ ಕೆಳಗಿನ ಶ್ಲೋಕದಲ್ಲಿ ವಿವರಿಸಿದ್ದಾನೆ!

**ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ**
**ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ॥** *(೬.೨೨)*

'ಈ ಸುಖವನ್ನು ಪಡೆದ ಮೇಲೆ ಇದಕ್ಕಿಂತ ಶ್ರೇಷ್ಠ ಸುಖ ಇನ್ನೊಂದಿದೆ ಎಂದು ಅವನಿಗನಿಸುವುದಿಲ್ಲ. ಈ ಸುಖದಲ್ಲಿ ನೆಲೆಸಿದ ಮೇಲೆ ಎಂಥ ದುಃಖದಿಂದಲೂ ಅವನು ವಿಚಲಿತನಾಗುವುದಿಲ್ಲ' ಇಂತಹ ಸ್ಥಿತಿಯನ್ನು ಪಡೆಯಲು ನಾವೂ ಧಾವಿಸೋಣವೆ?

## ಉಪಸಂಹಾರ

ಒಬ್ಬ ವ್ಯಕ್ತಿಯಲ್ಲಿ ಈ ಕೆಲವು ಲಕ್ಷಣಗಳು ಕಂಡುಬಂದಲ್ಲಿ ಆತನು ಜವಾಬ್ದಾರಿಯುಕ್ತ ವ್ಯಕ್ತಿ ಎಂದು ಗುರುತಿಸಬಹುದು:

- *ತನ್ನ ಸ್ಥಿತಿಗೆ ಇತರರನ್ನು ದೂರದಿರುವುದು.*
- *ಸನ್ನಿವೇಶದ ಪೂರ್ಣ ಪ್ರಯೋಜನವನ್ನು ಪಡೆಯುವುದು.*
- *ವಿರೋಧ ಪರಿಸ್ಥಿತಿಯ ಪ್ರಯೋಜನ ಪಡೆದು ಮುಂದುವರಿಯುವುದು.*
- *ಎಲ್ಲ ಮೂಲಗಳಿಂದಲೂ ಪಾಠ ಕಲಿಯುವುದು: ಸೂಕ್ಷ್ಮ ದೃಷ್ಟಿ.*

ಜವಾಬಾರಿಯುತ ಪ್ರಜೆಗಳನ್ನು ರೂಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ✷

**ನನಗೆ ಅಧ್ಯಾತ್ಮದಲ್ಲಿ ಆನಂದ ದೊರಕದಿದ್ದರೆ ಇಂದ್ರಿಯದಲ್ಲಿ ಆನಂದವನ್ನು ಅರಸಬೇಕೆ? ಅಮೃತ ಸಿಕ್ಕದೆ ಇದ್ದರೆ ಚರಂಡಿಯ ನೀರನ್ನು ಕುಡಿಯಬೇಕೆ? ಚಾತಕ ಪಕ್ಷಿ ಯಾವಾಗಲೂ ಮಳೆಯ ನೀರನ್ನು ಮಾತ್ರ ಕುಡಿಯುವುದು; ನೀರು, ಶುದ್ಧ ನೀರು ಬೇಕೆಂದು ಹಾರಾಡುತ್ತಿರುವುದು. ಎಂತಹ ಬಿರುಗಾಳಿ ಬರಲಿ, ಏನೇ ಆಗಲಿ, ಅದು ನೆಲಕ್ಕೆ ಇಳಿದು ಇಲ್ಲಿರುವ ನೀರನ್ನು ಕುಡಿಯುವುದಿಲ್ಲ.**

**–ಸ್ವಾಮಿ ವಿವೇಕಾನಂದ**

# ಗುರುವಿನ ರೂಪದಲ್ಲಿ ಗುರುಮಹಾರಾಜರು

**ತ**ಮಿಳುನಾಡಿನ ಪ್ರಸಿದ್ಧ ತೀರ್ಥಕ್ಷೇತ್ರ ಮದುರೈ ಮೀನಾಕ್ಷಿ ದೇವಿಯು ಸುಂದರೇಶ್ವರನನ್ನು ತನ್ನ ತಪಸ್ಸಿನಿಂದ ಒಲಿಸಿಕೊಂಡ ಪವಿತ್ರಭೂಮಿ. ಅಸಂಖ್ಯ ಭಕ್ತರು ಮೀನಾಕ್ಷಿದೇವಿಯ ದರ್ಶನ ಪಡೆಯಲು ಇಲ್ಲಿಗೆ ಬರುತ್ತಾರೆ. ಶ್ರದ್ಧೆ, ಭಕ್ತಿಗಳಿಂದ ದೇವಿಯ ಪೂಜೆಯನ್ನು ಮಾಡಿ ಅವಳ ಕೃಪೆಗೆ ಪಾತ್ರರಾಗುತ್ತಾರೆ. ದೇವಿಯ ದೇವಸ್ಥಾನವನ್ನು ಕೇಂದ್ರವಾಗಿರಿಸಿಕೊಂಡು ಈ ನಗರದ ನಿವಾಸಿಗಳು ದೈನಂದಿನ ಜೀವನವನ್ನು ಸಾವಿರಾರು ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ.

ಮದುರೈ ಕ್ಷೇತ್ರದಿಂದ ಸುಮಾರು ೬೦ ಕಿ.ಮೀ. ದೂರದಲ್ಲಿದೆ ಶಿವಕಾಶಿ. ಅಲ್ಲಿಗೆ ಸಮೀಪದ ಕೋಣಂಪಟ್ಟಿಯೆಂಬ ಗ್ರಾಮದಲ್ಲಿ ಶ್ರೀರಾಮಕೃಷ್ಣ ಮಠದ ಪ್ರೇರಣೆಯಿಂದ ಪ್ರಾರಂಭವಾದ ಶಾರದಾ ಆಶ್ರಮವಿದೆ. ಶ್ರೀಶಾರದಾದೇವಿಯವರ ೧೫೦ನೇ ಜನ್ಮ ಮಹೋತ್ಸವದ ಸಂದರ್ಭದಲ್ಲಿ ಈ ಆಶ್ರಮದ ಭಕ್ತರು ಶ್ರೀಮಾತೆಯ ಜನ್ಮಸ್ಥಳ ಜಯರಾಂಬಾಟಿಯನ್ನು ಅನುಕರಿಸಿ, ಅದೇ ರೀತಿಯಲ್ಲಿ ಶ್ರೀಮಾತೆಗೆ ಮನೆಯನ್ನು ಕಟ್ಟಿದ್ದಾರೆ. ಪರಮಪೂಜ್ಯ ಸ್ವಾಮಿ ಸ್ಮರಣಾನಂದಜಿಯವರು ಈ ದಕ್ಷಿಣದೇಶದ ಶ್ರೀಮಾತೆಯ ನಿವಾಸವನ್ನು ಉದ್ಘಾಟಿಸಿದರು.

ಕೋಣಂಪಟ್ಟಿ ಬಳಿ ಮೇಟ್ಟಮಲೈ ಎಂಬ ಒಂದು ಸಣ್ಣ ಹಳ್ಳಿಯಿದೆ. ಅಲ್ಲಿನ ಸಾಧಾರಣ ಮಹಿಳೆಯೊಬ್ಬಳ ಜೀವನದಲ್ಲಿ ನಡೆದ ಒಂದು ಅನುಪಮ ಘಟನೆಯೇ ಈ ಲೇಖನದ ವಸ್ತು.

ಕೋಣಂಪಟ್ಟಿ ಆಶ್ರಮದ (ಖಾಸಗಿ ಸಂಸ್ಥೆ) ಪ್ರಭಾವದಿಂದ ಅಲ್ಲಿನ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜನರೆಲ್ಲ ಶ್ರೀರಾಮಕೃಷ್ಣ ಮಠದಿಂದ ಹಮ್ಮಿಕೊಂಡಿದ್ದ 'ಮನೆಗೊಂದು ಸತ್ಸಂಗ' ಎಂಬ ಕಾರ್ಯಕ್ರಮದ ಪರಿಣಾಮವಾಗಿ ದಿವ್ಯತ್ರಯರ ಭಾವಚಿತ್ರ ಈ ಗ್ರಾಮಗಳ ಮನೆ ಮನೆಯಲ್ಲೂ ವಿರಾಜಿಸುತ್ತಿದೆ. ದಿವ್ಯತ್ರಯರ ಜೀವನ-ದರ್ಶನವೇ ಇವರೆಲ್ಲರ ಮನೆಮಾತು. ಈ ಗ್ರಾಮಗಳಲ್ಲಿ ನಡೆಯುವ ಸತ್ಸಂಗಗಳಲ್ಲಿ ಗ್ರಾಮಸ್ಥರೆಲ್ಲರೂ ಪಾಲ್ಗೊಳ್ಳುತ್ತಾರೆ. ದಿವ್ಯತ್ರಯರ ಭಜನೆ ಹಾಗೂ 'ವಚನವೇದ'ದ ವಾಚನ ಎಲ್ಲ ಮನೆಗಳಲ್ಲೂ ಕೇಳಿ ಬರುತ್ತದೆ. ಇದು ಶ್ರೀರಾಮಕೃಷ್ಣ ಲೋಕದ ವರ್ಣನೆಯೋ ಎಂಬಂತೆ ಈ ಹಳ್ಳಿಯ ಅತ್ಯಂತ ಸರಳ ಭಕ್ತರು ಶ್ರೀರಾಮಕೃಷ್ಣಮಯ ಜೀವನ ನಡೆಸುತ್ತಿದ್ದಾರೆ.

ಮೇಟ್ಟಮಲೈ ಗ್ರಾಮದ ಇಲಂಜಿಯಮ್ಮಾಳ್ ಶ್ರೀರಾಮಕೃಷ್ಣರ ದಿವ್ಯಕೃಪೆಗೆ ಪಾತ್ರಳಾದ ವಿವರವನ್ನು ಓದಿದಾಗ, ಪ್ರಾರ್ಥನೆ ಹಾಗೂ ಶ್ರದ್ಧೆಯಿಂದ ಅಸಾಧ್ಯವೂ ಸಿದ್ಧಿಸುತ್ತದೆ ಎಂಬ ನಂಬಿಕೆ ಎಲ್ಲರಿಗೂ ಬರುತ್ತದೆ.



ಈಕೆಯ ವಯಸ್ಸು ೬೦. ಎಲ್ಲ ಹಳ್ಳಿಯವರಂತೆ ಈಕೆಯೂ ಕಪಟವರಿಯದ ಸರಳ ಮಹಿಳೆ. ಹೆಚ್ಚು ಓದುಬರಹ ಅರಿಯದ ಈಕೆ ತೃಪ್ತಿಯಿಂದ ಜೀವನ ಸಾಗಿಸುತ್ತಿದ್ದಳು. ಆದರೆ ಕಷ್ಟವೆಂಬುದು ಯಾರಿಗೂ ತಪ್ಪಿದ್ದಲ್ಲ. ಅಂತಹ ಒಂದು ಕಠಿನ ಪರಿಸ್ಥಿತಿ ಈಕೆಗೂ ಬಂದಿತು. ಇದ್ದಕ್ಕಿದ್ದಂತೆ ಈಕೆಗೆ ಕೆಮ್ಮು ಪ್ರಾರಂಭವಾಗಿ ಹಲವು ತಿಂಗಳೇ ಆದರೂ ಗುಣವಾಗದೆ ಹೋಯಿತು. ಜೊತೆಗೆ ಉಸಿರಾಡುವಾಗಲೂ ಕಷ್ಟವಾಗತೊಡಗಿತು. ತನಗೆ ತಿಳಿದಿದ್ದ ಮನೆಯ ಮದ್ದುಗಳನ್ನು, ಪಥ್ಯಗಳನ್ನು ಮಾಡಿ ಗುಣವಾಗದೆ, ಪಕ್ಕದ ಕಾತ್ತೂರ್ ಗ್ರಾಮದ ವೈದ್ಯರ ಬಳಿಗೆ ಹೋದಳು. ವೈದ್ಯರು x-ray ಹಾಗೂ scan ಪರೀಕ್ಷೆಗಳ ಮೂಲಕ ಅವಳ ಶ್ವಾಸಕೋಶದಲ್ಲಿ ಒಂದು ಗಡ್ಡೆ ಬೆಳೆದಿದೆ ಎಂದು ಪತ್ತೆಹಚ್ಚಿದರು. ಮದುರೈ ನಗರದಲ್ಲಿ ಚಿಕಿತ್ಸೆ ಮುಂದುವರೆಸಲು ಸೂಚಿಸಿದರು ವೈದ್ಯರು. ಮದುರೈಗೆ ಬಂದು ಪ್ರಸಿದ್ಧವಾದ ಆಸ್ಪತ್ರೆಯಲ್ಲಿ ಪರೀಕ್ಷಿಸಿಕೊಂಡಾಗ, ಇದು ಕ್ಯಾನ್ಸರ್ ಎಂಬ ಭಯಾನಕ ವಿಚಾರ ತಿಳಿಯಿತು. ಮಹಿಳೆಗೆ ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಂತಾಗಿ, ಮುಂದೆ ಏನು ಮಾಡುವುದು ಎಂದು ತೋರದೆ ಕಂಗಾಲಾದಳು.

ಆ ಮಹಿಳೆ ಚೆನ್ನೈನ ಅಡ್ಯಾರ್‌ನಲ್ಲಿರುವ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಚಿಕಿತ್ಸೆಯನ್ನು ಮುಂದುವರೆಸಿದಳು. ಕಿಮೋಥೆರಪಿ